ಓ ಎಸ್ ನಂಃ 16/2021 ಪಿ.ಡಬ್ಲ್ಯೂ (1)

**ದಿನಾಂಕಃ 10-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 3 ರಿಂದ 6 ರವರ ಪರ ಶ್ರೀ ವೈ.ಜೆ. ವಕೀಲರಿಂದಃ**

ನನ್ನ ಗಂಡನ ತಂದೆ ಹೆಸರು ಶರಣಯ್ಯ. ಆತನಿಗೆ 1) ಶಿವಯ್ಯ 2) ವೀರಭದ್ರಯ್ಯ 3) ಬಸವರಾಜ ಮೂರು ಮಕ್ಕಳು. ನನ್ನ ಗಂಡ ಶಿವಯ್ಯ. ಪ್ರತಿವಾದಿ ನಂ. 1 ಇವರ ಕಡೆಯಿಂದ ನಾನು ದಾವಾ ಸೈಟ್ ನ್ನು 2006 ರಲ್ಲಿ ಖರೀದಿಸಿದ್ದೆ ಅದೇ ಸೈಟ್ ನಂ. 41 ಮತ್ತು 44 ಸರ್ವೇ ನಂ. 91/2 ರಲ್ಲಿ ಪ್ರತಿವಾದಿ ನಂ. 1 ಇವರು ಪ್ರತಿವಾದಿ ನಂ. 4 ರವರಿಗೆ ಮಾರಿದ್ದಾರೆ ಅದಕ್ಕಾಗಿ ಈ ದಾವೆ ಹಾಕಿದ್ದೇನೆ. ನನ್ನ ಖರೀದಿ ಪತ್ರ ನಿಪಿ 1 ರಂತೆ ಹಾಜರುಪಡಿಸಿದ್ದೇನೆ.

2. ಪ್ರತಿವಾದಿ ನಂ. 1 ಮಹಾಂತೇಶ ಇವರ ತಂದೆ ಹೆಸರು ಚಂದ್ರಶೇಖರಯ್ಯ ಬಜಾರ್ ಮಠ . ಮಹಾಂತೇಶನಿಗೆ ಈ ಆಸ್ತಿ ಹೇಗೆ ಬಂತು ಎಂದು ಗೊತ್ತಿಲ್ಲ. ಸದರಿ ಶೇಖರಯ್ಯ ಮತ್ತು ಆತನ ಮಕ್ಕಳ ಮದ್ಯೆ ಕಟುಂಬದ ಸ್ವತ್ತುಗಳಲ್ಲಿ ಪಾಲು ವಾಟ್ನಿ ಆಗಿತ್ತು ಎಂದರೆ ಸರಿ. ಆದರೆ ಈ ಪ್ಲಾಟ್ ನಂ. 41 ಮತ್ತು 44 ಪ್ರತಿವಾದಿ ನಂ. 1 ಮಹಾಂತೇಶ ಇವರಿಗೆ ಬಂದಿಲ್ಲ ಪ್ರತಿವಾದಿ ನಂ. 2 ಅಶೋಕರವರಿಗೆ ಬಂದಿತ್ತು ಎಂದರೆ ಗೊತ್ತಿಲ್ಲ.

3. ಓ ಎಸ್ ನಂ. 39/1997 ರಲ್ಲಿ ಟಿ. ಶಕುಂತಲಾ ಎಂಬುವವಳು ಪ್ರತಿವಾದಿ ನಂ. 1 ಮಹಾಂತೇಶ ವಿರುದ್ಧ ಇದೇ ಕೋರ್ಟನಲ್ಲಿ ಕೇಸು ಹಾಕಿ ಇದೇ ಸರ್ವೇ ನಂ. 92/1 ರಲ್ಲಿಯ ಪ್ಲಾಟ್ ನಂ. 21, 34, 36, 37, 38, 39, 40, 41, 42, 43, 44, 45, 46, 47, 48, 49, 50, 51 ಹಾಗೂ 57 ತನ್ನ ಪರವಾಗಿ ಗೆದ್ದುಕೊಂಡಿದ್ದಾಳೆ ಎಂದರೆ ಗೊತ್ತಿಲ್ಲ. ಆ ಪ್ರಕಾರ ಡಿಕ್ರಿಯಾಗಿದೆ ಎಂದರೆ ಗೊತ್ತಿಲ್ಲ. ಸದರಿ ಡಿಕ್ರಿ ಆಧರಿಸಿ ಅವಳು ಇಲ್ಲಿ ಇ.ಪಿ. ನಂ. 37/2018 ದಾಖಲಿಸಿ ಸದರಿ ಪ್ಲಾಟುಗಳ ಕುರಿತು ಮಹಾಂತೇಶನ ಕಡೆಯಿಂದ 18,50,288/- ಹಣ ಪಡೆದುಕೊಂಡು ಇದೇ ನ್ಯಾಯಾಲಯದಲ್ಲಿ ರಾಜಿಯಾದಳು ಎಂದರೆ ಗೊತ್ತಿಲ್ಲ.

4. 2006 ರಲ್ಲಿ ಸೈಟ್ ನಂ. 41 ಮತ್ತು 44 ನ್ನು ಮಹಾಂತೇಶ ನನಗೆ ಮಾರಿದ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ಲಾಟುಗಳು ಮಾಹಾಂತೇಶ ಇತನಿಗೆ ಸಂಬಂದಪಟ್ಟಿದ್ದು ಅಲ್ಲಾ

ಎಂದರೆ ಸರಿಯಲ್ಲ. ಪ್ಲಾಟ್ ನಂ. 41 ಮತ್ತು 44 ನ್ನು ಪ್ರತಿವಾದಿ ನಂ. 3 ರಿಂದ 6 ಪ್ರತಿವಾದಿ ನಂ. 2 ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಆ ಪ್ರಕಾರ ಪ್ರತಿವಾದಿ ನಂ. 3 ರಿಂದ 6 ಇವರೇ ಪ್ಲಾಟುಗಳ ಮಾಲೀಕ ಮತ್ತು ಕಬ್ಜಾದಾರರು ಎಂದರೆ ಸರಿಯಲ್ಲ. ಮಹಾಂತೇಶ ಇತನೇ ರಾಜಾ ಹುಸೇನಸಾಬನಿಗೆ ಮಾರಿದ್ದಾನೆ. ಆತ ಚೌರಪ್ಪ ಮತ್ತು ನೀಲಮ್ಮನಿಗೆ ಮಾರಿದ್ದಾನೆ.

5. ಖರೀದಿ ಪತ್ರದ ಆಧಾರದ ಮೇಲೆ 2 ಸೈಟು ನನ್ನ ಹೆಸರಿಗೆ ವರ್ಗಾಯಿಸಿಕೊಂಡಿದ್ದೆ. ಮಹಾಂತೇಶರವರಿಗೆ ಮಾರಾಟ ಮಾಡಿದ್ದಾನೆ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ ನಂ. 3 ರಿಂದ 6 ರವರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**